5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10042/2021

ಪಿಡಬ್ಲೂ- 01
ಸಿಡಬ್ಲೂ- 01

| | | |
|---|---|---|
| ಸಾಕ್ಷಿ ಹೆಸರು | - | ಅಣ್ಣಾಜಿಗೌಡ |
| ತಂದೆ ಹೆಸರು | - | ಈಶ್ವರಪ್ಪಗೌಡ |
| ವಯಸ್ಸು | - | 69 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಕಚವಿ ಗ್ರಾಮ ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 20-10-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಆರೋಪಿ ಗೊತ್ತು. ಚಾಸಾ-2 ನನ್ನ 2 ನೇ ಮಗ, ಚಾಸಾ-13 ನನ್ನ ಹಿರಿಯ ಮಗ, ಚಾಸಾ-3 , ಚಾಸಾ -4 ಗೊತ್ತು. ಚಾಸಾ 5 ರಿಂದ ಚಾಸಾ-12 ರವರರು ನಮ್ಮ ಹೊಲಕ್ಕೆ ಮೆಕ್ಕೆ ಜೋಳದ ಕೆಲಸಕ್ಕೆ ಬರುತ್ತಿದ್ದರು. ನನಗೆ ಕಚವಿ ಗ್ರಾಮದ ಸರ್ವೆ ನಂಬರ್ 6 ರಲ್ಲಿ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಮೆಕ್ಕೆ ಜೋಳವನ್ನು ಬೆಳೆದಿರುತ್ತೇನೆ.

ದಿಃ 18-05-2020 ರಂದು ನಮ್ಮ ಹೊಲದಲ್ಲಿ ಬೆಳೆದ ಮೆಕ್ಕೆ ಜೋಳವನ್ನು ಮುರಿದುನಮ್ಮ ಸ್ವಂತ ಟ್ರಾಕ್ಟರ್‌ನಲ್ಲಿ ಲೋಡ್ ಮಾಡಿಕೊಂಡು ಚಾಸಾ-2 ರವರು ಟ್ರಾಕ್ಟರ್ ನ್ನು ಚಲಾಯಿಸಿಕೊಂಡು ಆರೋಪಿಯ ಜಮೀನು ನನ್ನ ಜಮೀನಿನ ಪಕ್ಕ ಇದ್ದು ಸದ ಖಾಲಿ ಜಾಗದ ಪಕ್ಕದ ದಾರಿಯಲ್ಲಿ ಹೋಗುತ್ತಿದ್ದಾಗ ಸದರಿ ಟ್ರಾಕ್ಟರ್ ನಲ್ಲಿ ನಾನು , ಚಾಸಾ-5, ಚಾಸಾ-13 ಕುಳಿತಿದ್ದು ಮದ್ಯಾಹ್ನ 3 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ಆರೋಪಿ ಬಂದು ನಮ್ಮ ಟ್ರಾಕ್ಟರ್ ನ್ನು ತಡೆದು, ಸೂಳೆ ಮಗನೇ , ಬೋಸುಡಿ ಮಗನೆ ಎಂದು ಬೈದು ದೊಣ್ಣೆಯಿಂದ ಆರೋಪಿಯು ಚಾಸಾ-2 ರವರ ತಲೆಗೆ ನಿನ್ನನ್ನು ಸಾಯಿಸಿ ಬಿಡುತ್ತೇನೆ ಎಂದು ಬೈದು

ಹೊಡೆದಿರುತ್ತಾನೆ. ಆರೋಪಿ ದೊಣ್ಣೆಯಿಂದ ಹೊಡೆದಿದ್ದರಿಂದ ಚಾಸಾ-2 ಎಚ್ಚರ ತಪ್ಪಿ ನೆಲದ ಮೇಲೆ ಬಿದ್ದು ಕಿರುಚಾಡಿರುತ್ತಾನೆ. ಆಗ ನಾವು ಟ್ರಾಕ್ಟರ್ ನಿಂದ ಇಳಿದು ನಾನು , ಚಾಸಾ-13 ಮತ್ತು ಚಾಸಾ-5 ರವರು ಟ್ರಾಕ್ಟರ್ ನಿಂದ ಇಳಿದು ಹೋಗುವಾಗ ಆರೋಪಿ ದೊಣ್ಣೆಯನ್ನು ಬಿಸಾಡಿ ಓಡಿ ಹೋದನು.

ಆರೋಪಿ ಚಾಸಾ-2 ರವರ ತಲೆಗೆ ದೊಣ್ಣೆಯಿಂದ ಹೊಡೆದಿದ್ದರಿಂದ ಆತನ ತಲೆಗೆ ಬಾವು ಬಂದಿತ್ತು. ಆಗ ನಾನು , ಚಾಸಾ-5 ಮತ್ತು ಚಾಸಾ-13 ರವರು ಸೇರಿ ಚಾಸಾ-2 ರವರನ್ನು ಉಪಚರಿಸಿ ನಮ್ಮ ಸ್ವಂತ ಓಮಿನಿ ವಾಹನದಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆನವಟ್ಟಿ ಆಸ್ಪತ್ರೆಯಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋಗಿ ಎಂದು ಹೇಳಿರುತ್ತಾರೆ. ಆಗ ನಾವು ಚಾಸಾ-2 ರವರನ್ನು ಶಿಕಾರಿಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಶಿಕಾರಿಪುರ ಆಸ್ಪತ್ರೆಯಲ್ಲಿ ವೈದ್ಯರು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ನಂತರ ಚಾಸಾ-2 ರವರನ್ನು ಶಿವಮೊಗ್ಗ ಮ್ಯಾಕ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿರುತ್ತೇವೆ. ಆರೋಪಿ ಚಾಸಾ-2 ರವರನ್ನು ಸಾಯಿಸುವ ಉದ್ದೇಶದಿಂದ ದೊಣ್ಣೆಯಿಂದ ಹೊಡೆದು ಹಲ್ಲೆ ಮಾಡಿರುತ್ತಾನೆ.

ನಂತರ ಆನವಟ್ಟಿ ಪೋಲಿಸ್ ಠಾಣೆಗೆ ಸಂಜೆ 7 ಗಂಟೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -1(ಎ) ಎಂದು ಗುರುತಿಸಲಾಯಿತು. ಪೋಲೀಸರು ಬಂದು ಆರೋಪಿಯನ್ನು ಕರೆದುಕೊಂಡು ಹೋಗಿರುತ್ತಾರೆ. ದೂರು ಕೊಟ್ಟ ನಂತರ ಪೋಲೀಸರು ಕಚವಿ ಗ್ರಾಮದ ಆರೋಪಿ ಚಾಸಾ-2 ರವರನ್ನು ಹೊಡೆದ ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಪೋಲೀಸರು ಬೆಳಿಗ್ಗೆ 10-30 ಗಂಟೆ ಸಮಯಕ್ಕೆ ಮಹಜರ್ ಮಾಡಿರುತ್ತಾರೆ. ಪೋಲೀಸರಿಗೆ ಗಲಾಟೆಯಾದ ಜಾಗವನ್ನು ನಾನು ತೋರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ- 8, ಮಲ್ಲಪ್ಪಗೌಡ , ಚಾಸಾ-3 ರವರು ಹಾಜರು ಇದ್ದರು.

ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -2(ಎ) ಎಂದು ಗುರುತಿಸಲಾಯಿತು. ನಿಪಿ -2 ಕ್ಕೆ ನನ್ನ ಜೊತೆಯಲ್ಲಿ ಚಾಸಾ-3 , ಚಾಸಾ-4 , ಚಾಸಾ-8 ರವರು ಸಹಿ ಮಾಡಿರುತ್ತಾರೆ. ನಿಪಿ -2 ರ ಸಮಯದಲ್ಲಿ ಪೋಲೀಸರು ಫೋಟೋ ತೆಗೆಸಿರುತ್ತಾರೆ. ಸಾಕ್ಷಿಯು ಸದರಿ ಫೋಗೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು. ನಿಪಿ -3 ರಲ್ಲಿ ನಾನು ಸಹ ಕಂಡು ಬರುತ್ತೇನೆ. ಆರೋಪಿ ಚಾಸಾ-2 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ದಾರದಿಂದ ಕಟ್ಟಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

ಸಾಕ್ಷಿಯು ಸದರಿ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ -1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).